





ಹೋರಾಟದ ಇತಿಹಾಸಗಾಥೆಯನ್ನು ವಿವರಿಸುತ್ತಿರುವ ಸೈನಿಕ



ಜಸ್ವಂತ್ ಘರ್ ಯುದ್ಧ ಸ್ಮಾರಕದ ಬಳಿ ಪ್ರವಾಸಿ ತಂಡ

ಮಾತ್ರವಲ್ಲ, ಅಸ್ಸಾಂ ತನಕವೂ ನುಗ್ಗಿತ್ತು. ಆ ದಿನಗಳ ನಮ್ಮ ಹೋರಾಟವನ್ನು ಬೊಮ್‌ಡಿಲಾದಿಂದ ತವಾಂಗ್‌ಗೆ ಹೋಗುವ ದಾರಿಯಲ್ಲಿ ನೆನಪಿಸಿಕೊಳ್ಳಬಹುದು. ಸೆಲ್ಲಾ ಪಾಸ್ ಬಳಿ ಜಸ್ವಂತ್ ಸಿಂಗ್ ಯುದ್ಧ ಸ್ಮಾರಕ ಇದ್ದರೆ, ತವಾಂಗ್ ಪಟ್ಟಣದಲ್ಲಿ ತವಾಂಗ್ ವಾರ್ ಮೆಮೋರಿಯಲ್ ಇದೆ. ಇವೆರಡೂ 1962ರ ಭಾರತ – ಚೀನಾ ಯುದ್ಧದ ಅಂದಿನ ದೃಶ್ಯಗಳನ್ನು ನೆನಪಿಸುತ್ತದೆ. ಅರುಣಾಚಲ ಪ್ರದೇಶಕ್ಕೆ ತೆರಳುವ ಬಹುತೇಕ ಪ್ರವಾಸಿಗರು ಈ ಯುದ್ಧ ಸ್ಮಾರಕಗಳನ್ನು ನೋಡದೆ ಮುಂದೆ ಹೋಗುವುದಿಲ್ಲ.

ಅರುಣಾಚಲದ ತವಾಂಗ್‌ನಿಂದ ನೂರು ಕಿ.ಮೀ ಮುನ್ನ ನ್ಯೂಕಮಾಡೊಂಗ್‌ನಲ್ಲಿ 1962ರಲ್ಲಿ ನಡೆದ ಚೀನಾ–ಭಾರತ ಯುದ್ಧದಲ್ಲಿ ಬ್ರಿಗೇಡಿಯರ್ ಹೋಶಿಯಾರ್ ಸಿಂಗ್ ನೇತೃತ್ವ ವಹಿಸಿದ್ದರು. ಈ ಯುದ್ಧದಲ್ಲಿ ನಮ್ಮ 862 ಸೈನಿಕರು ಹುತಾತ್ಮರಾದರು. ಇವರ ಸ್ಮರಣಾರ್ಥ ನ್ಯೂಕಮಾಡೊಂಗ್‌ನಲ್ಲಿ ಸ್ಮಾರಕ ನಿರ್ಮಿಸಲಾಗಿದೆ. ಗುವಾಹಟಿಯಿಂದ ಬೊಮ್‌ಡಿಲಾ ಮೂಲಕ ತವಾಂಗ್‌ಗೆ ತೆರಳುವ ರಸ್ತೆಯಲ್ಲಿ ಸುಮಾರು ಹನ್ನೆರಡು ಸಾವಿರ ಅಡಿ ಎತ್ತರದಲ್ಲಿ ಜಸ್ವಂತ್ ಯುದ್ಧ ಸ್ಮಾರಕ ಗಮನ ಸೆಳೆಯುತ್ತದೆ. ಆ ಯುದ್ಧದಲ್ಲಿ 'ಶಹೀದ್' ಆದ, ಮಹಾವೀರ ಚಕ್ರ ವಿಜೇತ ಸುಬೇದಾರ್ ಜಸ್ವಂತ್ ಸಿಂಗ್ ರಾವತ್‌ರ ಶೌರ್ಯ ಮತ್ತು ಬಲಿದಾನದ ಯಶೋಗಾಥೆ ಇಲ್ಲಿದೆ. ತವಾಂಗ್‌ಗೆ ತೆರಳುವ ಪ್ರವಾಸಿಗರು ಈ ಸ್ಮಾರಕಕ್ಕೂ ಭೇಟಿ ನೀಡಲು ಮರೆಯುವುದಿಲ್ಲ.

1962 ರ ಯುದ್ಧದಲ್ಲಿ ಚೀನಾ ಸೈನಿಕರ ವಿರುದ್ಧ ಹೋರಾಡಿದ ಜಸ್ವಂತ್ ಸಿಂಗ್‌ರ ಕಾರ್ಯದ ಕುರಿತಂತೆ ಅನೇಕರಿಗೆ ಹೆಚ್ಚು ತಿಳಿದಿಲ್ಲ. ಆದರೆ ಅವರೊಬ್ಬರೇ 72 ಗಂಟೆಗಳ ಕಾಲ ಚೀನಾ ಸೈನಿಕರ ವಿರುದ್ಧ ಹೋರಾಡಿದ್ದರು. ವಿಭಿನ್ನ ಚೌಕಿಗಳಲ್ಲಿ ಅಡಗಿ ಕುಳಿತು ಚೀನೀ ಸೈನಿಕರ ಮೇಲೆ ನಿರಂತರ ದಾಳಿ ನಡೆಸುತ್ತಿದ್ದರು. ಚೀನೀ ಸೈನಿಕರು ತವಾಂಗ್‌ನಿಂದ ಮುಂದೆ ನೂರಾನಾಂಗ್ ತಲುಪಿದರು. ಅದೇ ದಿನ ನೂರಾನಾಂಗ್‌ನಲ್ಲಿ ಎರಡೂ ದೇಶಗಳ ಸೈನಿಕರ ನಡುವೆ ಯುದ್ಧ ಜೋರಾಗಿತ್ತು. ಆ ವೇಳೆಗೆ ಪರಮವೀರ ಚಕ್ರ ವಿಜೇತ ಜೋಗಿಂದರ್ ಸಿಂಗ್, ಲಾನ್ಸ್ ನಾಯಕ್ ತ್ರಿಲೋಕಿ ಸಿಂಗ್ ನೇಗಿ ಮತ್ತು ರೈಫಲ್ ಮ್ಯಾನ್ ಗೋಪಾಲ ಸಿಂಗ್ ಗೊಸಾಯಿ ಸಹಿತ ನೂರಾರು ಸೈನಿಕರು ಹುತಾತ್ಮರಾಗಿದ್ದರು. ಗಢ್‌ವಾಲ ರೈಫಲ್‌ನ ನಾಲ್ಕನೇ ಬಟಾಲಿಯನ್‌ನಲ್ಲಿದ್ದ ಜಸ್ವಂತ್ ಸಿಂಗ್ ರಾವತ್ ಏಕಾಂಗಿಯಾಗಿ ನೂರಾನಾಂಗ್‌ನ ಜವಾಬ್ದಾರಿ ವಹಿಸಿಕೊಂಡರು. ಮೂರು ದಿನಗಳ ಕಾಲ ಬೇರೆ ಬೇರೆ ಬಂಕರ್‌ಗಳಿಗೆ ತೆರಳಿ ಅವರೊಬ್ಬರೇ ಗುಂಡು ಹಾರಾಟ ನಡೆಸಿದರು. ಇದನ್ನು ಕಂಡ ಚೀನೀ ಸೈನಿಕರು ಹೆದರಿದರು. ಭಾರತೀಯ ಸೇನೆಯಲ್ಲಿ ತುಂಬಾ ಸೈನಿಕರಿದ್ದಾರೆಂದು ಭ್ರಮೆ ಪಟ್ಟರು. ನಂತರ ಚೀನಾ ಸೈನಿಕರು ತಮ್ಮ ರಣನೀತಿ ಬದಲಿಸಿ, ಆ ಸೆಕ್ಟರ್‌ಅನ್ನು ನಾಲ್ಕೂ ದಿಕ್ಕುಗಳಿಂದ ಸುತ್ತುವರಿದರು. ಬಳಿಕ ಜಸ್ವಂತ್ ಸಿಂಗ್ ಚೀನಾ ಸೈನಿಕರಿಗೆ ಸೆರೆ ಸಿಕ್ಕು ಹುತಾತ್ಮರಾದರು.

## ಸೆಲಾಪಾಸ್‌ನ ಜಸ್ವಂತ್ ಘರ್

ತವಾಂಗ್–ವೆಸ್ಟ್ ಕಾಮೆಂಗ್ ಜಿಲ್ಲೆಗಳ ಮಧ್ಯೆ 13,700 ಅಡಿ ಎತ್ತರದಲ್ಲಿರುವ ಸೆಲಾ ಪಾಸ್. ಭಾರತ– ಚೀನಾದ 1962ರ ಯುದ್ಧಕ್ಕೆ ಸಾಕ್ಷಿಯಾದ ಇನ್ನೊಂದು ಸ್ಥಳ. ಬೋರ್ಡರ್ ರೋಡ್ಸ್ ಆರ್ಗನೈಸೇಷನ್ಸ್ ಇಲ್ಲಿನ ರಸ್ತೆಗಳನ್ನು ನೋಡಿಕೊಳ್ಳುತ್ತಿದೆ. ಇಲ್ಲೇ ಸಮೀಪ ತವಾಂಗ್ ನದಿಯ ಉಪನದಿಯಾದ ನುರಾನಂಗ್ ನದಿ ಹರಿಯುತ್ತಿದೆ.

ಸೆಲಾ ಪಾಸ್‌ನಲ್ಲಿ ಜಸ್ವಂತ್ ಘರ್ ಯುದ್ಧ ಸ್ಮಾರಕವಿದೆ. ಆಗಿನ ಯುದ್ಧದಲ್ಲಿ ಅವರು ಏಕಾಂಗಿ ಹೋರಾಡಿದ್ದಾಗ ಸೆಲಾ ಎಂಬ ಬುಡಕಟ್ಟು ಮಹಿಳೆ ಅವರಿಗೆ ಆಹಾರ –ಮತ್ತು ನೀರು ಒದಗಿಸಿದ್ದಳಂತೆ. ಇದು ನುರಾನಾಂಗ್‌ಗೆ ಸಮೀಪವಿದೆ. ಗಢ್ವಾಲ್ ರೈಫಲ್ಸ್‌ನ ಸೈನಿಕರು ಇದರ ಮೇಲ್ವಿಚಾರಣೆ ನೋಡಿಕೊಳ್ಳುತ್ತಾರೆ. ಪ್ರಯಾಣಿಕರ ಯೋಗಕ್ಷೇಮದ ಜೊತೆ ಅತಿ ಕಡಿಮೆ ಬೆಲೆಗೆ ಚಹಾ ತಿಂಡಿಯನ್ನು ಕೂಡಾ ಇಲ್ಲಿಯ ಮಿಲಿಟರಿ ಕ್ಯಾಂಟೀನ್ ಪ್ರವಾಸಿಗರಿಗೆ ನೀಡುತ್ತದೆ. ಜಸ್ವಂತ್ ಘರ್ ವೀಕ್ಷಿಸಿದ ನಂತರ ಚಹಾ – ತಿಂಡಿ ಸ್ವೀಕರಿಸದೆ ಯಾವ ಪ್ರವಾಸಿಗರೂ ಹೊರಡುವುದಿಲ್ಲ. ಅಂದು ಜಸ್ವಂತ್ ಸಿಂಗ್ ಯುದ್ಧದ ಸಮಯ ಅಡಗಿ ಕುಳಿತ ಬಂಕರ್‌ಗಳನ್ನೂ ಇಲ್ಲಿ ಕಾಣಬಹುದು. ಒಳಗಡೆ ಜಸ್ವಂತ್‌ರ ಕಂಚಿನ ಪ್ರತಿಮೆಯೂ ಇದೆ. ಅವರು ಬಳಸಿದ ಯುದ್ಧ ಸಾಮಗ್ರಿ, ವಸ್ತ್ರ, ಬೆಲ್ಟ್, ಕ್ಯಾಪ್ ಎಲ್ಲವನ್ನೂ ಇಲ್ಲಿ ಕಾಣಬಹುದು.

ಭಾರತ ಚೀನಾ ನಡುವೆ 3,500 ಕಿ.ಮೀ. (2,174 ಮೈಲು) ಉದ್ದದ ಗಡಿ ಪ್ರದೇಶವಿದೆ. ಆದರೆ ಎರಡೂ ದೇಶಗಳ ನಡುವೆ ವಿವಾದಿತ ಕ್ಷೇತ್ರ 4,000 ಕಿ.ಮೀ. ಇದೆ. ಹೀಗಿದ್ದರೂ ಚೀನಾ ಪ್ರಕಾರ ಗಡಿ ವಿವಾದದ ಕ್ಷೇತ್ರ ಕೇವಲ 2 ಸಾವಿರ ಕಿ.ಮೀ ಮಾತ್ರ. ಇವತ್ತಿಗೂ ಈ ಭಾಗದಲ್ಲಿ ಚೀನಾದ ಗಡಿ ಕುರಿತ ಕಿರಿಕಿರಿಗಳು ನಿಂತಿಲ್ಲ.